ಇದ್ದುದರಿಂದ ಅದಕ್ಕಾಗಿ ಹಂಬಲಿಸುವುದು ವ್ಯರ್ಥ ಎನ್ನುವ ಭಾವ ಅವಳಲ್ಲಿ ಬಲವಾಗಿ ಬೇರೂರಿತ್ತು. ತನ್ನಂಥವರ ಬದುಕೇ ಇಷ್ಟು. ದೇವರೇ ಅನ್ಯಾಯ ಮಾಡಿರುವಾಗ ಯಾರ ಮೊರೆ ಹೋಗುವುದು? ವೀರೂವಾಗಿಯೇ ನೋಡಬೇಕೆಂದಿದ್ದ ತನ್ನವರಿಗೆ ಈ ವರ್ಷಳನ್ನು ಒಪ್ಪಿ ಹೆಣ್ಣೆಂದು ಸ್ವೀಕರಿಸಲು ಸಾಧ್ಯವೇ? ಎಂದಿಗೂ ಸಾಧ್ಯವಿಲ್ಲ. ಹೆತ್ತವರಿಗೆ ಅಂಗವಿಕಲ ಮಕ್ಕಳನ್ನು ಒಪ್ಪಿಕೊಳ್ಳುವ ಮನಸ್ಸಿರುತ್ತದೆ, ಬುದ್ಧಿಮಾಂದ್ಯ ಮಕ್ಕಳನ್ನು ಒಪ್ಪಿಕೊಳ್ಳುವ ಮನಸ್ಸಿರುತ್ತದೆ, ದುಷ್ಟ ಮಕ್ಕಳನ್ನು ಒಪ್ಪಿಕೊಳ್ಳೋ ಮನಸ್ಸಿರುತ್ತದೆ. ಆದರೆ ಗಂಡಾಗಿ ಹುಟ್ಟಿ, ಹೆಣ್ಣಿನ ಮನಸ್ಸು, ಭಾವನೆ ಇರೋ ನನ್ನಂತಹ, ನಮ್ಮದಲ್ಲದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಿರುವ ಈ ಹೆಣ್ಣೂ ಅಲ್ಲದ, ಗಂಡೂ ಅಲ್ಲದ ಮಂಗಳಮುಖಿಯರನ್ನ ಯಾವ ಹೆತ್ತವರೂ, ಬಂಧು ಬಾಂಧವರೂ ತಮ್ಮ ಮಕ್ಕಳೆಂದು ಒಪ್ಪಕೊಳ್ಳಲಾರರು. ಇದು ಜಗತ್ತಿನ ಸತ್ಯ, ಬದುಕಿನ ಕರಾಳ ನಂಬಿಕೆ. ಸಮಾಜದ ಕ್ರೂರ ವ್ಯವಸ್ಥೆ, ಇದನ್ನು ನಮ್ಮಿಂದ ಬದಲಿಸಲು ಸಾಧ್ಯವೇ? ಅಕ್ಕಯ್ಯನಿಗೂ ಅದು ಅರ್ಥವಾಗಿಯೇ ಮತ್ತೆ ನನ್ನನ್ನು ಹುಡುಕಿಕೊಂಡು ಬಂದಿಲ್ಲ. ಅವಳು ಬರುವುದೂ ಬೇಡ. ಅವಳ ಕುಟುಂಬದಲ್ಲಿ ನಾನು ಹೇಗೆ ಅಂತ ಗೊತ್ತಾಗಿ ಅಕ್ಕಯ್ಯ ಅವಮಾನ ಎದುರಿಸುವುದು ಬೇಡ. ತಾನು ಕೂಡ ಅಕ್ಕಯ್ಯ ಬಂದಿದ್ದು, ನನ್ನೊಂದಿಗೆ ಮಾತನಾಡಿದ್ದು ಎಲ್ಲವನ್ನೂ ಮರೆತುಬಿಡಬೇಕು. ಅಳುತ್ತಲೇ ಎದೆ ಗಟ್ಟಿ ಮಾಡಿಕೊಳ್ಳುತ್ತಾ ತೀರ್ಮಾನಿಸಿಕೊಂಡಳು.

ಹೋಟೆಲಿಗೆ ಬೇಕಾದ ದಿನಸಿ, ತರಕಾರಿ ಹೊತ್ತು ತಂದು ಒಳ ಹೋದವಳಿಗೆ ಆಘಾತ ಕಾದಿತ್ತು. ಇಡೀ ಹೋಟೆಲಿನ ಭರ್ತಿ ಕುಳಿತಿದ್ದವರನ್ನು ಕಂಡು ಭೂಮಿ ಇಲ್ಲಿಯೇ ಕುಸಿಯಬಾರದೇ ಅನ್ನಿಸಿ ತಲೆ ತಗ್ಗಿಸಿ ನಿಂತುಬಿಟ್ಟಳು ವರ್ಷ. ಯಾರನ್ನೂ ಕತ್ತೆತ್ತಿ ನೋಡುವ ಧೈರ್ಯ ಅವಳಲ್ಲಿ ಇರದೆ ಅಯ್ಯೋ ಈ ಕ್ಷಣ ಯಾಕಪ್ಪ ಬಂದಿದೆ ನನ್ನನ್ನು ಈ ವೇಷದಲ್ಲಿ, ಈ ಸ್ಥಿತಿಯಲ್ಲಿ ನೋಡಿ ಅಲ್ಲಿದ್ದವರ ಎದೆ ಒಡೆದು ಹೋಗಬಹುದೇನೊ, ಏನು ಮಾಡಲಿ, ಎಲ್ಲಿ ಅಡಗಿಕೊಳ್ಳಲಿ ನಾನು ಅನ್ನೋ ಆತಂಕದಲ್ಲಿ ಕಂಪಿಸಲಾರಂಭಿಸಿದಳು. ಅದೆಷ್ಟು ಹೊತ್ತು ಹಾಗೆಯೇ ತಲೆತಗ್ಗಿಸಿ ನಿಂತಿದ್ದಳೊ, ವೀರೂ ಅಂತ ಬಂದು ತನ್ನನ್ನು ಅಪ್ಪಿದ ಬಾಹುಗಳನ್ನೇ ನೋಡಿದಳು. ‘ವೀರೂ, ವೀರೂ ಯಾಕೋ ಹೀಗೆ ಮಾಡಿಬಿಟ್ಟೆ, ಬದುಕಿದ್ದೂ ಸತ್ತವನಂತೆ ಯಾಕೊ ಈ ಹೆತ್ತ ಒಡಲಿಗೆ ಚೂರಿ ಹಾಕಿಬಿಟ್ಟೆ, ನಿನ್ನದೇ ಕೊರಗಿನಲ್ಲಿ ನಾನೂ ದಿನಾ ಸಾಯ್ತಾ ಇದ್ದೀನಲ್ಲೋ?’ ಅಂತ ಅಪ್ಪಿ ಅಪ್ಪ ಕಣ್ಣೀರು ಸುರಿಸುತ್ತಿದ್ದರೆ ಅಪ್ಪನನ್ನು ಅಪ್ಪ ಎನ್ನಲು ಧೈರ್ಯ ಸಾಲದೆ ಒಂದೂ ಮಾತನಾಡದೆ, ಇಂತಹ ಪರಿಸ್ಥಿತಿ ಬರಬಹುದು ಅನ್ನೋ ಕಲ್ಪನೆಯೂ ಇಲ್ಲದ ವರ್ಷ ದಿಗ್ಭ್ರಾಂತಿಯಲ್ಲಿ ನಿಂತಿದ್ದಳು. ನಿಧಾನವಾಗಿ ಎದ್ದು ಬಂದು ಜಗದೀಶರು ‘ಮಾದೇವ, ಈಗ್ಲಾದರೂ ಮಗಾ ನಿನ್ನ ಕಣ್ಮುಂದೆ ನಿಂತಿದ್ದನಲ್ಲ. ಇನ್ನಾಕೆ ಅಳ್ತೀಯಾ? ಸಮಾಧಾನ ಮಾಡ್ಕೊ. ವೀರೂ ವೀರೂ ಕಂದಾ ನಾವಿನ್ನೂ ಬದುಕಿದ್ದಿವಿ ಕಣೋ. ನಿನ್ನ ಪಾಲಿಗೆ ನಾವು ಸತ್ತಿರಬಹುದು, ಆದರೆ ನಮ್ಮ ಪಾಲಿಗೆ ನೀನು ಬದುಕಿದ್ದಿಯಾ ಕಣೋ, ನೀನು ಯಾವತ್ತಾದರೂ ನಮ್ಮನ್ನ ಹುಡುಕಿಕೊಂಡು ಬಂದೇ ಬರ್ತೀಯಾ ಅನ್ನೊ ನಂಬಿಕೆಲೇ ನಾವು ಇನ್ನೂ ಜೀವಂತವಾಗಿದ್ದೀವಿ ಕಣೋ, ಆ ಮನೆಯ ಐಸಿರಿನೇ ನೀನು ಅಲ್ಲವೇನೊ. ನೋಡು ನಿನ್ನ ದೊಡ್ಡಮ್ಮ, ಅಕ್ಕಂದಿರು ಎಲ್ಲಾ ಬಂದಿದ್ದೀವಿ’ ಅಂದಾಗ ಎಲ್ಲರನ್ನೂ ಕತ್ತೆತ್ತಿ ಕಷ್ಟಪಟ್ಟು ನೋಡಿದಳು. ದೊಡ್ಡಮ್ಮ, ಅಕ್ಕಂದಿರು ಎಲ್ಲರೂ ಹತ್ತಿರ ಬಂದು ವರ್ಷಳನ್ನು ತಬ್ಬಿಕೊಂಡು ವೀರೂ ವೀರೂ ಅಂತ ಕಣ್ಣೀರು ಹಾಕಿದರು. ಕಣ್ಣೀರಿನ ಕೋಡಿ ಹರಿಯಿತು. ಅಲ್ಲಿದ್ದವರೂ ಅಳುತ್ತಲೇ ಆ ಹೃದಯಸ್ಪರ್ಶಿ ಸನ್ನಿವೇಶಕ್ಕೆ ಸಾಕ್ಷಿಯಾದರು. ಒಂದಿಷ್ಟು ಹೊತ್ತು ಎಲ್ಲರ ಭಾವಸಂಗಮ ಅಲ್ಲಿ ನಡೆದಿತ್ತು, ಅದೆಷ್ಟು ಹೊತ್ತು ಒಬ್ಬರನೊಬ್ಬರು ಅಪ್ಪಿ ಅತ್ತರೋ, ಕೊನೆಗೂ ವಾಸ್ತವಕ್ಕೆ ಬಂದ ಶಾಂಭವಿ ‘ವೀರೂ, ಕಂದಾ ನಿನ್ನ ಹತ್ರ ತುಂಬಾ ಮಾತಾಡಬೇಕು, ಇಲ್ಲೆಲ್ಲ ಮಾತಾಡೋಕೆ ಆಗಲ್ಲ, ನಡೆ ವೀರೂ ಊರಿಗೆ ಹೋಗೋಣ, ನೀನು ಇಲ್ಯಾಕೆ ಇರಬೇಕು. ನೀನು ಪಡೋ ಕಷ್ಟಗಳನ್ನೆಲ್ಲ ಮೇನಕ ಹೇಳಿದ್ದಾಳೆ. ಸಾಕು ವನವಾಸ ಮಾಡಿದ್ದು, ಇನ್ನಾದರೂ ನೀನು ಸುಖವಾಗಿ, ನೆಮ್ಮದಿಯಾಗಿ ಇರಬೇಕು, ಹೊರಡು ವೀರೂ’ ಅವನನ್ನು ಹಿಡಿದುಕೊಂಡೇ ಹೊರಟಳು.

‘ದೊಡ್ಡಮ್ಮ ಎಮೋಷನಲ್ ಆಗಬೇಡ, ನಾನು ಇದ್ದಕ್ಕಿದ್ದಂತೆ ಹೊರಟು ಬರೋಕೆ ಆಗಲ್ಲ, ನಿಮ್ಮನ್ನೆಲ್ಲ ನೋಡಿದೆನಲ್ಲ ಅಷ್ಟು ಸಾಕು, ನಾನು ಇಲ್ಲಿಯೇ ನೆಮ್ಮದಿ, ಸಂತೋಷದಿಂದ ಇದ್ದೇನೆ. ಬಿಡು ನನ್ನ ದೊಡ್ಡಮ್ಮ’. ದೊಡ್ಡಮ್ಮನ ಅಪ್ಪುಗೆಯಿಂದ ಬಿಡಿಸಿಕೊಳ್ಳಲೆತ್ನಿಸುತ್ತಾ ಅವರ ಅಕ್ಕರೆ, ಪ್ರೀತಿ ವಾತ್ಸಲ್ಯದ ಪಾಶದಿಂದ ಹೊರಬರಲಾರದೆ ಚಡಪಡಿಸಿದಳು ವರ್ಷ. ಹತ್ತಿರ ಬಂದ ಜಗದೀಶರು ‘ಇಲ್ಲ ವೀರೂ ಇಲ್ಲ. ನಿನ್ನನ್ನ ಒಂದು ಕ್ಷಣವೂ ಇಲ್ಲಿ ಬಿಡಲಾರೆ, ನೀನು ಹೆಣ್ಣಾಗಿಯೋ, ಗಂಡಾಗಿಯೋ, ಹೇಗಾದರೂ ಇರು, ಒಟ್ಟಿನಲ್ಲಿ ನಮ್ಮ ಕಣ್ಣು ಮುಂದೆ ಇರು ಸಾಕು, ನೋಡೋ ನಿಮ್ಮಪ್ಪ ಹೇಗೆ ಆಗಿದ್ದಾನೆ ನೋಡು, ನಿನ್ನಮ್ಮನನ್ನು ಕಳೆದುಕೊಂಡು, ನಿನ್ನನ್ನೂ ದೂರ ಮಾಡಿಕೊಂಡು ಜೀವಂತ ಶವವಾಗಿದ್ದಾನೆ. ಈಗ ನೀನು ಬರದೆ ಇದ್ದಲ್ಲಿ ಅವನೂ ನಿಮ್ಮಮ್ಮನ ಬಳಿ ಹೋಗಿ ಬಿಡುತ್ತಾನೆ. ಬರಲ್ಲ ಅಂತ ಮಾತ್ರ ಹೇಳಬೇಡ ವೀರೂ, ಇಲ್ಲಿ ಹೀಗೆ ನೀನು ಬದುಕ ಬೇಕಾ? ನಮ್ಮ ಮನೆಯ ರಾಜಕುಮಾರ ನೀನು, ಹೊರಟುಬಿಡು ಕಂದಾ’ ಅಂಗಲಾಚಿದರು. ವೇದನೆಯಿಂದ ವರ್ಷ ‘ನಾನು ರಾಜಕುಮಾರನೇ, ಅಯ್ಯೊ ದೊಡ್ಡಪ್ಪ, ನೀವಿನ್ನೂ ಅದೇ ಭ್ರಮೆಯಲ್ಲಿ ಇದ್ದೀರಾ? ನಾನು ರಾಜಕುಮಾರನಲ್ಲ, ರಾಜಕುಮಾರಿಯೂ ಅಲ್ಲ. ಮಂಗಳಮುಖಿ ನಾನು, ನನ್ನಂಥವಳಿಂದ ನಿಮಗೆ ಅವಮಾನ, ನೋವು, ಸಂಕಷ್ಟ ಅಷ್ಟೆ, ನನಗೂ ನೆಮ್ಮದಿ ಇಲ್ಲ, ನಿಮಗೂ ನೆಮ್ಮದಿ ಇಲ್ಲ, ಊರಿನವರ ಮುಂದೆ ನೀವು ಅಪಮಾನಿತರಾಗುವುದು ನನಗೆ ಇಷ್ಟವಿಲ್ಲ. ನಾನು ಇಲ್ಲಿ ನೆಮ್ಮದಿಯಿಂದ ಇದ್ದೇನೆ. ಅಲ್ಲಿಗೆ ಬಂದು ಈ ನೆಮ್ಮದಿ, ಸಂತೋಷನಾ ಕಳೆದುಕೊಳ್ಳಲಾರೆ. ದಯವಿಟ್ಟು ನನ್ನನ್ನು ಕ್ಷಮಿಸಿ ದೊಡ್ಡಪ್ಪ, ನನ್ನನ್ನು ನನ್ನ ಪಾಡಿಗೆ ಬಿಟ್ಟು ಬಿಡಿ, ನಿಮ್ಮೊಂದಿಗೆ ಬಾಳುವ ಭಾಗ್ಯವಿಲ್ಲ ನನಗೆ’ ಜೋರಾಗಿ ಅತ್ತು ಬಿಟ್ಟಳು.

ಅವಳನ್ನು ಒಪ್ಪಿಸಲು ಯಾರಿಂದಲೂ ಸಾಧ್ಯವಾಗದೆ ಅಸಮರ್ಥರಾದರು. ‘ಸರಿ ವೀರೂ, ನಿನ್ನ ಬಲವಂತಪಡಿಸಿ ಮತ್ತೆ ನಿನ್ನನ್ನು ಕಳೆದುಕೊಳ್ಳಲಾರೆವು. ನಿನ್ನ ಇಲ್ಲೇ ಬಿಟ್ಟು ಹೋಗುತ್ತೇವೆ, ಆದರೆ ಒಂದು ಆಸೆಯನ್ನು ನೀನು ನೆರವೇರಿಸಲೇಬೇಕು, ನಾವು ಪದೇ ಪದೇ ಬರ್ತಾ ಇರುತ್ತೇವೆ. ಅದಕ್ಕೆ ನೀನು ಒಪ್ಪಿಕೋಬೇಕು’ ಅಂತ ಅಂದಾಗ ವರ್ಷ ಸಮಾಧಾನದ ಉಸಿರು ಬಿಡುತ್ತಾ ‘ಆಯ್ತು ದೊಡ್ಡಪ್ಪ. ನೀವು ಯಾವಾಗ ಬೇಕಾದರೂ ಧಾರಾಳವಾಗಿ ಬನ್ನಿ’ ಎಂದಳು. ಅಪ್ಪ ಬಾ ಅಂತ ಕರೆಯಲೇ ಇಲ್ಲ ಅನ್ನೋ ಸತ್ಯ ಅವಳ ಗಮನಕ್ಕೆ ಬಂದಿತು. ಅವರು ಕರೆದಿದ್ದರೂ ತಾನು ಮತ್ತೆ ಊರಿಗೆ ಹೋಗುವ ಮನಸ್ಸು, ಧೈರ್ಯ ವರ್ಷಳಲ್ಲಿ ಕಾಣಲಿಲ್ಲ. ವರ್ಷಳ ಮಾತು ಕೇಳಿ ಅವರೆಲ್ಲರಿಗೂ ಖುಷಿಯಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಊರು ಕಡೆ ಹೊರಟರು. ಆದರೆ ಅವರೇನು ಸುಮ್ಮನಿರುವಂತೆ ಕಾಣಲಿಲ್ಲ. ಇವತ್ತು ಇಷ್ಟು ಆಗಿದ್ದು ನಾಳೆ ಇನ್ನಷ್ಟು ಆಗಿಯೇ ಆಗುತ್ತದೆ ಅನ್ನುವ ಭರವಸೆಯೊಂದಿಗೆ ಊರು ಸೇರಿದರು. ಮಾದೇವ ಮಾತ್ರ ನಿರ್ಲಿಪ್ತನಾಗಿದ್ದ.

ಊರಿನಲ್ಲಿ ವೀರೂಗಾಗಿ ಏನಾದರೂ ಮಾಡಲೇ ಬೇಕು ಅನ್ನೋ ಹುಮ್ಮಸ್ಸಿನಲ್ಲಿ ಜಗದೀಶರು ಏನೇನೊ ಆಲೋಚಿಸಿ ಕೊನೆಗೊಂದು ನಿರ್ಧಾರಕ್ಕೆ ಬಂದರು. ಒಬ್ಬನನ್ನೇ ಬಾ ಅಂದರೆ ವೀರೂ ಬರಲಾರ. ಅವನ ಜೊತೆಯವರನ್ನೂ ಇಲ್ಲಿಗೆ ಕರೆತಂದರೆ ಅವರಿಗೆ ಆಶ್ರಯ ಸಿಕ್ಕರೆ ಖಂಡಿತ ಬಂದೇ ಬರುತ್ತಾನೆ. ಏನು ಮಾಡುವುದು ಅಂತ ಚಿಂತಿಸಿದರು. ಮಾದೇವನಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ ಬೇಡವೇ ಬೇಡ ಎಂದು ಬಿಟ್ಟ. ‘ಅವನು ವೀರೂವಾಗಿದ್ದರೆ ಮಾತ್ರ ಈ ಮನೆಯಲ್ಲಿ ಅವಕಾಶ. ಗಂಡಾಗಿ ಹುಟ್ಟಿ ಹೆಣ್ಣಿನಂತೆ ಇರುವುದಾದರೆ ಅವನು ಬರುವುದೇ ಬೇಡ, ನನ್ನ ಮಗ ಸತ್ತು ಹೋಗಿದ್ದಾನೆ ಅಂತ ಯಾವತ್ತೊ ಅಂದುಕೊಂಡಿದ್ದೇನೆ. ಮತ್ತೆ ಇಲ್ಲಿ ಬಂದು ಆ ಅವತಾರದಲ್ಲಿ ಊರವರ ಮುಂದೆಲ್ಲ ನಮ್ಮ ಮಾನ ತೆಗೆಯಬೇಕಾ?, ಅವನು ಅಲ್ಲಿಯೇ ಇರಲಿ’ ಅಂತ ಅಂದುಬಿಟ್ಟ. ಜಗದೀಶರು ‘ಅಲ್ವೋ ಮಾದೇವ, ಅವನಿಗಾಗಿ ದಿನಾ ಕೊರಗ್ತಾ ಇದ್ದೀಯಾ, ಅವನು ಬದುಕಿದ್ದಾನೆ ಅಂತ ಗೊತ್ತಾದ ಕೂಡಲೇ ಅವನ ನೋಡೋಕೆ ಓಡೋಡಿ ಹೋದೆ, ಅಲ್ಲಿ ಅವನ್ನ ನೋಡಿ ತಬ್ಬಿಕೊಂಡು ಕಣ್ಣೀರು ಸುರಿಸಿದೆ, ಮನೆಗೆ ಬಾ ಅಂತ ನಾವು ಕರೆದಾಗ ನೀನು ಅಲ್ಲಿ ಏನೂ ಹೇಳಲಿಲ್ಲ, ಈಗ ನೋಡಿದ್ರೆ ಹಿಂಗೆ ಅಂತಾ ಇದ್ದೀಯಲ್ಲೊ ಮಾದೇವ’ ತಮ್ಮನ ನಿರ್ಧಾರ ಒಪ್ಪದೇ ಪ್ರಶ್ನಿಸಿದರು.

‘ಈಗ್ಲೂ ಅವನು ಹೀಗಾಗಿ ಬಿಟ್ಟನಲ್ಲ ಅನ್ನೋ ಕೊರಗು ಇದೆ ಅಣ್ಣ, ಸತ್ತೇ ಹೋಗಿದ್ದಾನೆ ಅಂತ ಅಂದುಕೊಂಡ ಮಗ ಬದುಕಿದ್ದಾನೆ ಅಂತ ಗೊತ್ತಾದಾಗ ಆ ಸಂತೋಷದಲ್ಲಿ ಅವನ್ನ ನೋಡೋಕೆ ಓಡೋಡಿ ಹೋದೆ, ಅವನ್ನ ನೋಡಿ ಸಂತೋಷದಿಂದ ಅತ್ತಿದ್ದು ನಿಜ, ಆದರೆ ಅವನ ವೇಷ ನೋಡಿ ಅಸಹ್ಯ ಆಗಿಹೋಯ್ತು ಅಣ್ಣ, ಇಂತಹ